## ತರಕಾರಿಯಲ್ಲಿ ಕಲೆ

ಚಿತ್ರವನ್ನು ನೋಡಿದಾಗ ಏನು ವಿಶೇಷತೆ ಕಾಣುತ್ತಿಲ್ಲ ಎಂದೆನಿಸುವುದು ಸಹಜ. ಆದರೆ, ಸ್ವಲ್ಪ ಆಸಕ್ತಿ ವಹಿಸಿ ದಿಟ್ಟಿಸಿ ವೀಕ್ಷಿಸಿದಾಗ ಕಲಾತ್ಮಕತೆಯ ಹೊಸ ಮಜಲಿನ ಅರಿವಾಗುತ್ತದೆ. ನಿಮ್ಮ ಊಹೆ ನಿಜ, ಇಲ್ಲಿ ಕಾಣುವ ಎಲ್ಲವೂ ಅಡುಗೆಗಾಗಿ ಬಳಸುವ ತರಕಾರಿಗಳಿಂದ ಶೃಂಗರಿಸಲಾಗಿದೆ. ಕಲಬುರ್ಗಿಯಲ್ಲಿ ಗೆಳೆಯನ ಮಗಳ ಮದುವೆಯಲ್ಲಿ ಈ ದೃಶ್ಯ ನನ್ನ ಕ್ಯಾಮೆರಾದಲ್ಲಿ ಸೆರೆಯಾಯಿತು. ನಾವೀನ್ಯತೆಯಿಂದ ಕೂಡಿರುವ ಇದನ್ನು ಮೆಚ್ಚಲೇಬೇಕು.

—ವೆಂಕಟೇಶ ಮುದಗಲ್, ಕಲಬುರ್ಗಿ






## ರಂಗಮನೆಯ ‘ನಟರಾಜನ’ ನರ್ತನ!

ಕಲೆಗಳ ಆರಾಧ್ಯ ದೈವ ನಟರಾಜ. ಈ ಚಿತ್ರದಲ್ಲಿ ಕಾಣುತ್ತಿರುವ ನಟರಾಜ ಮೂರ್ತಿ ನಿರ್ಮಾಣದ ಹಿಂದೆ ತಾಯಿಯೊಬ್ಬರ ನೆನಪಿನ ನಂಟಿದೆ. ಕಲೆಯ ಆರಾಧಕ ರಂಗ ನಿರ್ದೇಶಕ ಜೀವನ್ ರಾಂ ಸುಳ್ಯ ಇದರ ಸ್ಥಾಪಕ. ‘ರಂಗಮನೆ’ಯ ತಾಯಿ ಎಂದೇ ಕರೆಯಲ್ಪಡುವ ವನಜಾಕ್ಷಿ ಜಯರಾಮರ ನೆನಪಿಗೆ ಈ ಮೂರ್ತಿಯನ್ನು ಕೆತ್ತನೆ ಮಾಡಿಸಿದ್ದರು. 2013ರಲ್ಲಿ ನಿರ್ಮಾಣಗೊಂಡ ಈ ಮೂರ್ತಿಯೂ ಒಂದೇ ನೋಟಕ್ಕೆ ಕಲಾರಸಿಕರನ್ನು ತನ್ನತ್ತ ಸೆಳೆಯುತ್ತದೆ.

—ಲಿಖಿತಾ ಗುಡ್ಡೆಮನೆ, ಪುತ್ತೂರು



## ‘ಕಣಜದ ಗೂಡು’

ಈ ಚಿತ್ರದಲ್ಲಿ ಕಾಣುತ್ತಿರುವುದು ‘ಕಣಜದ ಗೂಡು’. ಮರಗಳ ರೆಂಬೆಗಳ ನಡುವೆ ಮೊಟ್ಟೆ ಇಡಲು ಹಕ್ಕಿಗಳು ಈ ಗೂಡುಗಳನ್ನು ಕಟ್ಟುತ್ತವೆ. ಎಲ್ಲಾ ಮೊಟ್ಟೆಗಳು ಒಡೆದು ಮರಿಗಳು ಆದ ನಂತರ ಹಾರಿ ಹೋಗಿ ಗೂಡು ಬರಿದಾಗುತ್ತದೆ. ಸಾಮಾನ್ಯವಾಗಿ ಮೂರು ಅಡಿ ಎತ್ತರ ಹಾಗೂ ಐದು ಅಡಿ ಸುತ್ತಳತೆ ಇರುವ ಗೂಡು ಬಹಳ ಗಟ್ಟಿಯಾಗಿ ಇರುತ್ತದೆ. ಇಂಗ್ಲೀಷ್‌ನಲ್ಲಿ ಈ ಗೂಡಿಗೆ **hornet** ಎಂದು ಕರೆಯುತ್ತಾರೆ. ಕಚ್ಚಿದರೆ ನಂಜು ಹಾಗೂ ವಿಷಕಾರಿ. ಸುರೇಶ ನೀಚಡಿ ಇವರ ಮನೆಯ ಧಾರೆ ಹಣ್ಣಿನ ಮರದಲ್ಲಿ ಕಟ್ಟಿದ್ದ ಗೂಡು.

—ಅಂಚೆ ಸುಬ್ರಹ್ಮಣ್ಯ, ಕೊಪ್ಪ


ಗೂಡಿನ ಒಳಾಂಗಣ